ಈ) ಈವರೆಗೂ ನೀಡಿರುವ ಪಡಿತರ ಚೀಟಿ ಎಷ್ಟು (ಹೋಬಳಿವಾರು ವಿವರ ನೀಡುವುದು)?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರೀಕರ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) 95.

ಆ) ಹೌದು.

ಇ) ಅನ್ವಯಿಸುವುದಿಲ್ಲ. ಆಹಾರಧಾನ್ಯ ಸಮರ್ಪಕ ಹಂಚಿಕೆಯ ಬಗ್ಗೆ ತಪಾಸಣಾ ಕಾರ್ಯ ಯಾವಾಗಲೂ ಜಾರಿಯಲ್ಲಿರುತ್ತದೆ.

ಈ) ಈವರೆಗೂ ನೀಡಿರುವ ಪಡಿತರ ಚೀಟಿಯ ಹೋಬಳಿವಾರು ವಿವರ ಈ ಕೆಳಕಂಡಂತೆ ಇರುತ್ತದೆ:

ಕ್ರ. ಸಂ.	ಹೋಬಳಿ ಹೆಸರು	ಅಂತ್ಯೋದಯ	ಅಕ್ಷಯ	ಎಪಿಎಲ್	ಒಟ್ಟು
1	2	3	4	5	6
1	ಹರದನಹಳ್ಳಿ	1382	11201	3618	16201
2	ಚಂದಕವಾಡಿ	3412	11493	3994	18899
3	ಕಸಬಾ	3404	29276	12367	45047
	ಒಟ್ಟು	**8198**	**51970**	**19979**	**80147**

1214 ಶ್ರೀ ತುಕಾರಾಂ ಇ (ಸಂಡೂರ್) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಲಕ್ಷ್ಮೀ ಯೋಜನೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರ ವಿಧಿಸಿರುವ ಮಾನದಂಡವೇನು;

ಆ) ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಿಂದ ಈ ಯೋಜನೆಯಡಿ 2006–07, 2007–08, 2008–09ನೇ ಸಾಲಿನಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳೆಷ್ಟು; (ವಿವರ ನೀಡುವುದು)

ಇ) ಆಯ್ಕೆಯಾದ ಫಲಾನುಭವಿಗಳಿಗೆ ಬಾಂಡ್‌ಗಳನ್ನು ವಿತರಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) 1. ಫಲಾನುಭವಿಯು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ, ಕಡ್ಡಾಯ ಗುರುತಿನ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ಸೇರಿರಬೇಕು ಅಥವಾ ಬಡತನ ರೇಖೆಗಿಂತ ಕೆಳಗಿನ ಕುಟುಂಬವೆಂದು ಪರಿಗಣಿಸಲು ಸರ್ಕಾರವು ಆಗಿಂದಾಗ್ಗೆ ನಿಗದಿಪಡಿಸುವ ಆದಾಯ ಮಿತಿಯೊಳಗಿರುವ ಕುಟುಂಬ ಎಂಬುದನ್ನು ಕುರಿತು ಸಕ್ಷಮ ಪ್ರಾಧಿಕಾರ ಹೊರಡಿಸುವ ಪ್ರಮಾಣ ಪತ್ರ ಹೊಂದಿರಬೇಕು.

2. ಕುಟುಂಬದ ಎರಡು ಹೆಣ್ಣು ಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯಲು ಸೀಮಿತಗೊಲಿಸಲಾಗಿದೆ. ಈ ಕುಟುಂಬವು ಮಗುವಿನ ತಾಯಿ ಅಥವಾ ತಂದೆ ಯಾರಾದರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಒಟ್ಟು ಮೂರು ಮಕ್ಕಳನ್ನು ಮೀರಿರ ಕೂಡದು.

(ಸೂಚನೆ: ದೇವದಾಸಿಯರ ಮಕ್ಕಳು ಈ ಯೋಜನೆಗೆ ಅರ್ಹರಿರುತ್ತಾರೆ).

3. ಈ ಯೋಜನೆಯನ್ನು ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುವುದು.

4. ಅಂಗನವಾಡಿಗಳಿರುವ ಪ್ರದೇಶಗಳಲ್ಲಿ ಈ ಯೋಜನೆ ಅಡಿಯಲ್ಲಿ ದಾಖಲಾದ ಹೆಣ್ಣು ಮಗುವು ಕೆಳಕಂಡ ಮನದಂಡಗಳನ್ನು ಪೂರೈಸಬೇಕು:

ಅ) ಆರೋಗ್ಯ ಇಲಾಖೆಯಿಂದ ಮಗುವಿಗೆ ರೋಗ ನಿರೋಧಕ ಲಸಿಕೆ ಹಾಕಿಸಬೇಕು.

ಆ) 0–6 ವರ್ಷದವರೆವಿಗೆ ನಿರಂತರವಾಗಿ ಅಂಗನವಾಡಿ ಕೇಂದ್ರಕ್ಕೆ ಹಾಜರಾಗಬೇಕು

ಇ) ಶಿಕ್ಷಣ ಇಲಾಖೆಯಿಂದ ಅಂಗೀಕರಿಸಲ್ಪಟ್ಟ ಶಾಲೆಗಳಲ್ಲಿ ದಾಖಲಿಸಬೇಕು. ನಿರಂತರವಾಗಿ ಶಾಲೆಗೆ ಹಾಜರಾಗುತ್ತಿರುವ ಬಗ್ಗೆ ಶಾಲೆಯ ಪ್ರಾಧಿಕಾರದಿಂದ ದಾಖಲಿಸಿರಬೇಕು.

ಈ) ಒಂದನೇ ತರಗತಿಯಿಂದ ತೇರ್ಗಡೆ ಹೊಂದಿ ಕನಿಷ್ಠ ಎಂಟನೇ ತರಗತಿಯವರೆಗೆ ವ್ಯಾಸಂಗ ಮಾಡಿದಲ್ಲಿ ಅಂತಿಮವಾಗಿ ಠೇವಣಿ ಮತ್ತು ಬಡ್ಡಿ ಹಣವನ್ನು ಪಡೆಯಲು ಅರ್ಹಳಾಗುತ್ತಾಳೆ.

ಉ) ಬಾಲ ಕಾರ್ಮಿಕ ನಿಷೇಧ ಕಾಯ್ದೆ 1986 ರಂತೆ ಬಾಲ ಕಾರ್ಮಿಕಳಾಗಿರತಕ್ಕದ್ದಲ್ಲ.

ಊ) 18 ವರ್ಷ ಪೂರೈಸುವ ಮೊದಲು ವಿವಾಹವಾಗತಕ್ಕದ್ದಲ್ಲ. ಈ ಅವಧಿಯೊಳಗೆ ವಿವಾಹವಾಗಿರುವುದು ಕಂಡು ಬಂದಲ್ಲಿ ಅರ್ಹ ಮೊಬಲಗನ್ನು ಸಂದಾಯ ಮಾಡಲಾಗುವುದಿಲ್ಲ.

ಋ) ಆಯ್ಕೆಯಾದ ಫಲಾನುಭವಿಯು ಮೇಲೆ ತಿಳಿಸಿದ ಅರ್ಹತೆಯ ಮಾನದಂಡಗಳಲ್ಲಿನ ಒಂದು ಅಥವಾ ಅದಕ್ಕೂ ಹೆಚ್ಚಿನ ಷರತ್ತುಗಳನ್ನು ಪೂರೈಸದಿದ್ದಲ್ಲಿ ಸೌಲಭ್ಯ ನೀಡುವುದನ್ನು ತತ್‌ಕ್ಷಣದಿಂದ ರದ್ದುಪಡಿಸಲಾಗುವುದು.

ಆ) ಒಟ್ಟಾರೆ 3,032 ಫಲಾನುಭವಿಗಳನ್ನು 2006–07, 2007–08 ಮತ್ತು 2008–09ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಆಯ್ಕೆ ಮಾಡಲಾಗಿದೆ. ವಿವರಗಳು ಕೆಳಕಂಡಂತಿವೆ.

2006–07	2007–08	2008–09	ಒಟ್ಟು
1123	1067	842	3,032

ಇ) 3,032 ಫಲಾನುಭವಿಗಳ ಪೈಕಿ 1,489 ಫಲಾನುಭವಿಗಳಿಗೆ ಬಾಂಡ್‌ಗಳನ್ನು ವಿತರಿಸಲು ಬಾಕಿ ಇದೆ.

ಈ) ಸರ್ಕಾರದ ಆದೇಶ ಸಂಖ್ಯೆ: ಮೆಮೆಇ/123/ಮಮಇ/2009, ದಿನಾಂಕ 30–6–2009ರಂತೆ ಎಲ್‌ಐಸಿ ಸಂಸ್ಥೆಗೆ ರೂ. 91,45,40,500.00 ಗಳನ್ನು ಬಿಡುಗಡೆಗೊಳಿಸಲಾಗಿದ್ದು ಬಾಂಡ್‌ಗಳು ಮುದ್ರಣ ಹಂತದಲ್ಲಿವೆ. ಸದ್ಯದಲ್ಲಿ ವಿತರಿಸಲಾಗುವುದು.

1216 ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪಟ್ಟಣದಲ್ಲಿರುವ ಪಿ.ಕೆ.ಪಿ.ಎಸ್. ಬ್ಯಾಂಕುಗಳು, ಪತ್ತಿನ ಸಹಕಾರ ಸಂಘಗಳು ಮತ್ತು ಅರ್ಬನ್ ಬ್ಯಾಂಕುಗಳ ಸಂಖ್ಯೆ ಎಷ್ಟು;